# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1002(1319) |
| ಸದಸ್ಯರ ಹೆಸರು | ಶ್ರೀ ಎಂ ನಾರಾಯಣಸ್ವಾಮಿ [ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು] |
| ಉತ್ತರಿಸಬೇಕಾದ ದಿನಾಂಕ | 15-03-2021 |
| ಉತ್ತರಿಸಬೇಕಾದ ಸಚಿವರು | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) 2020-2021ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ರಾಜ್ಯಾದ್ಯಾಂತ ಶಾಲೆಗೆ ದಾಖಲಾಗದೆ ಹೊರಗುಳಿದ ಮಕ್ಕಳ ಸಂಖ್ಯೆ ಎಷ್ಟು; | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 0-18 ವಯೋಮಾನದ ಮಕ್ಕಳ ಮನೆ-ಮನೆ ಸಮೀಕ್ಷೆ ನಡೆಸಲಾಗುತ್ತಿದ್ದು, ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ಸಮೀಕ್ಷಾ ಕಾರ್ಯ ಪೂರ್ಣಗೊಂಡ ನಂತರ ಶಾಲೆಯಿಂದ ಹೊರಗುಳಿದ ಮಕ್ಕಳ ಖಚಿತ ಮಾಹಿತಿ ಲಭ್ಯವಾಗಲಿದೆ. |
| ಆ) ದಾಖಲಾಗದೆ ಹೊರಗುಳಿದ ಮಕ್ಕಳನ್ನು ಶಾಲೆಗೆ ದಾಖಲಾಗುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಅದಾಗ್ಯೂ, ಶಾಲೆಯಿಂದ ಹೊರಗುಳಿದ ಮಕ್ಕಳು ಕಂಡು ಬಂದಲ್ಲಿ ಶಾಲೆಗೆ ದಾಖಲಿಸುವ ಪ್ರಕ್ರಿಯೆ ಶಿಕ್ಷಣ ಇಲಾಖೆಯಿಂದ ನಿರಂತರವಾಗಿ ನಡೆಸಲಾಗುತ್ತದೆ. ದಿರ್ಘಾವಧಿಗೆ ಶಾಲೆಯಿಂದ ಹೊರಗುಳಿದಲ್ಲಿ, ಅಂತಹ ಮಕ್ಕಳಿಗೆ 3, 6, 12 ತಿಂಗಳ ವಿಶೇಷ ವಸತಿ ಸಹಿತ ಮತ್ತು ವಸತಿ ರಹಿತ ತರಬೇತಿಗಳನ್ನು ನೀಡಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ. |
| ಇ) ಕಳೆದ ಮೂರು ವರ್ಷಗಳಿಂದ ರಾಜ್ಯದ್ಯಾಂತ ಎಷ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕಟ್ಟಡಗಳನ್ನು ದುರಸ್ಥಿ ಮಾಡಿ ಉನ್ನತೀಕರಿಸಲಾಗಿದೆ; (ವಿವರ ನೀಡುವುದು) | 1) 2017-18 ರಿಂದ 2019-20ನೇ ಸಾಲಿನವರೆಗೆ ರಾಜ್ಯದ ಮುಂದುವರೆದ ಯೋಜನಾ ಕಾರ್ಯಕ್ರಮಗಳಡಿ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಯಡಿ ಒಟ್ಟು 6161 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ದುರಸ್ಥಿ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿರುತ್ತದೆ. ಅನುಬಂಧ-1ರಲ್ಲಿರಿಸಿದೆ.<br>2) 2019-20ನೇ ಸಾಲಿನಲ್ಲಿ ಉಂಟಾದ ಅತಿವೃಷ್ಟಿಯಿಂದಾಗಿ ಶಿಥಿಲಾವಸ್ಥೆ ತಲುಪಿದ 6,196 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 13,260 ಕೊಠಡಿಗಳ ದುರಸ್ಥಿಗಾಗಿ ರೂ 19951.75/- ಲಕ್ಷಗಳ ಅನುದಾನವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಮುಖಾಂತರ ಅನುಷ್ಠಾನಗೊಳಿಸಲಾಗಿದೆ.<br>(ಅನುಬಂಧ-2ರಲ್ಲಿರಿಸಿದೆ) |

| | |
|---|---|
| | • ಪ್ರಸಕ್ತ 2020–21ನೇ ಸಾಲಿನಲ್ಲಿ ಸರ್ಕಾರಿ ಶಾಲಾ ಕೊಠಡಿಗಳ ದುರಸ್ಥಿ ಕಾಮಗಾರಿಗೆ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ. |
| **ಈ)** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲ ಮಿತಿಯೊಳಗೆ ಭರ್ತಿ ಮಾಡಲಾಗುವುದು; | ಸರ್ಕಾರಿ ಪ್ರಾಥಮಿಕ ಖಾಲಿ ಇರುವ ಹುದ್ದೆಗಳು– 25813 ಹಾಗೂ ಸರ್ಕಾರಿ ಪ್ರೌಢ ಶಾಲೆಗಳ ವಿವಿಧ ವೃಂದದ ಖಾಲಿ ಹುದ್ದೆಗಳ ಸಂಖ್ಯೆ–5065.<br>ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಆರ್ಥಿಕ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದ್ದು, ಆರ್ಥಿಕ ಇಲಾಖೆಯ ಸಹಮತಿ ಪಡೆದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |
| **ಉ)** ಸಿಬ್ಬಂದಿ ಕೊರತೆ ಇರುವ ಕಾರಣ ಇಲಾಖೆ ಎದುರಿಸುತ್ತಿರುವ ತೊಂದರೆಯನ್ನು ಕಡಿಮೆ ಮಾಡಲು ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಲು ಕ್ರಮಕೈಗೊಳ್ಳಲಾಗುತ್ತಿದೆ. |

**ಇಪಿ 92 ಪಿಜಿಸಿ 2021**

S. Su

**[ ಎಸ್.ಸುರೇಶ್ ಕುಮಾರ್]**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ**
**ಸಕಾಲ ಸಚಿವರು.**

| ಅನುಬಂಧ-1 | | | |
|---|---|---|---|
| **2017-18ರಿಂದ 2019-20ರವರೆಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಬಿಡುಗಡೆಯಾದ ಅನುದಾನದ ವಿವರ** | | | |
| ಪ್ರಾಥಮಿಕ ಶಾಲೆಗಳು | | | |
| ವರ್ಷ | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನ |
| 2017-18 | 1621 | 2771 | 3214.99 |
| 2018-19 | 1697 | 2327 | 2114.82 |
| 2019-20 | 610 | 3041 | 2102.996 |
| ಒಟ್ಟು | **3928** | **8139** | **7432.806** |

| ಪ್ರೌಢ ಶಾಲೆಗಳು | | | |
|---|---|---|---|
| ವರ್ಷ | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನ |
| 2017-18 | 778 | 2171 | 3505.99 |
| 2018-19 | 1000 | 1868 | 2127.62 |
| 2019-20 | 455 | 1962 | 1577.996 |
| ಒಟ್ಟು | **2233** | **6001** | **7211.606** |

09.03.21

ಸಹನಿರ್ದೇಶಕರು (ಶಾಲಾ ಶಿಕ್ಷಣ)

## ಅನುಬಂಧ-2

2019-20ನೇ ಸಾಲಿನಲ್ಲಿ ಮಳೆಹಾನಿಗೊಳಗಾದ ಶಾಲಾ ಕಟ್ಟಡಗಳ ದುರಸ್ಥಿಗೆ ಬಿಡುಗಡೆಯಾದ ಅನುದಾನದ ವಿವರ (ಒಟ್ಟು ಅನುದಾನ ರೂ.199 ಕೋಟಿ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾಗಿರುವುದು)

| ಕ್ರ.ಸಂ. | ಜಿಲ್ಲೆಗಳು | ಮಂಜೂರು | | |
|---|---|---|---|---|
| | | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಆರ್ಥಿಕ |
| 1 | ಶಿವಮೊಗ್ಗ | 828 | 1713 | 3448.54 |
| 2 | ಬೆಳಗಾವಿ | 832 | 2065 | 2774.30 |
| 3 | ಚಿಕ್ಕೋಡಿ | 1165 | 2658 | 3757.60 |
| 4 | ಬಾಗಲಕೋಟೆ | 113 | 316 | 269.21 |
| 5 | ಧಾರವಾಡ | 265 | 912 | 1049.33 |
| 6 | ಗದಗ | 281 | 770 | 1656.50 |
| 7 | ಹಾವೇರಿ | 669 | 1459 | 1809.52 |
| 8 | ಉತ್ತರ ಕನ್ನಡ | 184 | 262 | 337.35 |
| 9 | ಶಿರಸಿ | 298 | 394 | 418.20 |
| 10 | ಮೈಸೂರು | 483 | 950 | 1842.00 |
| 11 | ಕೊಡಗು | 161 | 241 | 322.00 |
| 12 | ಹಾಸನ | 480 | 808 | 862.25 |
| 13 | ಚಿಕ್ಕಮಗಳೂರು | 123 | 220 | 343.45 |
| 14 | ದಕ್ಷಿಣ ಕನ್ನಡ | 179 | 277 | 774.50 |
| 15 | ಉಡುಪಿ | 135 | 215 | 287.00 |
| | ಒಟ್ಟು | **6196** | **13260** | **19951.75** |

09.03.21

ಸಹನಿರ್ದೇಶಕರು (ಶಾಲಾ ಶಿಕ್ಷಣ)